

# ಶಾಂತಿ ಕದಡಲು ಕಾಯುತ್ತಿರುವ ‘ಗಡಿ ಗುಮ್ಮ’

ದೇಶಗಳ ನಡುವಣ ‘ಗಡಿ ನಿಯಂತ್ರಣ ರೇಖೆ’ ಎರಡೂ ದೇಶಗಳ ಪಾಲಿಗೆ ಬೆಂಕಿಯ ರೇಖೆಯಿದ್ದಂತೆ. ಹೆಮ್ಮೆ, ಘನತೆ, ಸ್ವಾಭಿಮಾನ–ಸ್ವಾತಂತ್ರ್ಯ, ಪಾವಿತ್ರ್ಯದ ಸಂಕೇತಗಳಾದ ಈ ರೇಖೆಗಳನ್ನು ಯಾವ ಕಡೆಯಿಂದ ದಾಟುವುದೂ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಂತೆ. ಭಾರತದ ಮಟ್ಟಿಗಂತೂ ನೆರೆಯ ದೇಶಗಳಾದ ಚೀನಾ, ಪಾಕಿಸ್ತಾನ, ನೇಪಾಳಗಳು ಸೀಮೋಲ್ಲಂಘನದ ಬೆದರಿಕೆ ಒಡ್ಡುತ್ತಿವೆ. ಚೀನಾ–ಭಾರತದ ಸೈನಿಕರ ನಡುವೆ ಜೂನ್ 15ರಂದು ಸಂಭವಿಸಿದ ಚಕಮಕಿಯಲ್ಲಿ ಇಬ್ಬದಿಯಲ್ಲೂ ಜೀವಹಾನಿ ಸಂಭವಿಸಿದೆ. ಏನಿದು ಗಡಿ ತಕರಾರು? ಎಲ್ಲೆಲ್ಲಿ ಸಮಸ್ಯೆ? ಆ ಪ್ರದೇಶಗಳ ಮಹತ್ವವೇನು? ಭಾರತದ ಗಡಿಯಲ್ಲಿನ ವಿವಾದಾಸ್ಪದ ಪ್ರದೇಶಗಳಲ್ಲಿ ‘ಸುಧಾ’ ಓದುಗರನ್ನು ಅಡ್ಡಾಡಿಸುವ ಗಡಿಯಲ್ಲಿನ ಕಿಡಿಯ ಕುರಿತ ಈ ಬರಹ, ಚೀನಾ ಸೇರಿದಂತೆ ನೆರೆ ರಾಷ್ಟ್ರಗಳೊಂದಿಗೆ ಭಾರತ ಹೊಂದಿರುವ ಬಿಕ್ಕಟ್ಟನ್ನೂ ವಿಶ್ಲೇಷಿಸುತ್ತದೆ.

■ ಡಿ.ಎಂ. ಘನಶ್ಯಾಮ